೩) ಬೆಳೆ ಪದ್ಧತಿಯನ್ನು ಉಲ್ಲಂಘಿಸದಿರಲು ಮತ್ತು ಲೋಕಲೈಜೇಷನ್ ಪದ್ಧತಿಯನ್ನು ಅನುಸರಿಸಲು ರೈತರಿಗೆ ತಿಳುವಳಿಕೆ ನೀಡಲಾಗಿದೆ.

೪) ಆರೆ ನೀರಾವರಿ ಬೆಳೆಗಳನ್ನೇ ಬೆಳೆಯಲು ಮತ್ತು ಜೌಗಿನಿಂದ ಕೂಡಿದ ಹಾಗೂ ಭತ್ತ ಬೆಳೆಯಲು ಲೋಕಲೈಜ್ ಆಗಿರುವ ಕ್ಷೇತ್ರದಲ್ಲಿ ಮಾತ್ರ ಭತ್ತ ಬೆಳೆಯಲು ರೈತರಿಗೆ ತಿಳಿಸಲಾಗಿದೆ.

೫) ಬೆಳೆ ಪರಿವರ್ತನಾ ಪದ್ಧತಿಯನ್ನು ಅನುಸರಿಸುವುದರಿಂದ ಪ್ರತಿ ವರ್ಷ ಭತ್ತ ಬೆಳೆಯುವುದನ್ನು ತಪ್ಪಿಸಿದಂತಾಗುವುದರ ಜೊತೆಗೆ ಭೂಮಿಯ ಫಲವತ್ತತೆಯನ್ನು ಸುಧಾರಿಸಬಹುದೆಂದು ರೈತರಿಗೆ ತಿಳುವಳಿಕೆ ನೀಡಲಾಗಿದೆ.

೬) ಹೆಚ್ಚಿನ ನೀರನ್ನು ಜಮೀನಿನಿಂದ ಹೊರದೂಡಲು ಬಸಿಗಾಲುವೆಗಳನ್ನು ನಿರ್ಮಿಸುವ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಿಂದ ಭೂಮಿಯು ಜೌಳಾಗುವುದನ್ನು ತಡೆಯಬಹುದಾಗಿದೆ.

ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಸಮುದ್ರ ಕೊರೆತದಿಂದ ಆದ ನಷ್ಟ

೧೫೨. ಶ್ರೀ ವಿಜಯಕುಮಾರಶೆಟ್ಟಿ (ಸುರತ್ಕಲ್).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ತಾಲ್ಲೂಕಿನ ಕೂಳೂರಿನಿಂದ ಬಂಗ್ರ ಕೂಳೂರು ಮುಕ್ಕ ಪಣಂಬೂರು ಮತ್ತಿತರ ವ್ಯಾಪಕ ಸಮುದ್ರ ಕೊರೆತ ಉಂಟಾಗಿದ್ದು ಸಾರ್ವಜನಿಕರ ಅಪಾರ ಆಸ್ತಿಯು ನಷ್ಟವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಮುದ್ರ ಕೊರೆತ ತಡೆಯಲು ಸರ್ಕಾರ ಕೈಗೊಂಡ ಶಾಶ್ವತ ಹಾಗೂ ತಾತ್ಕಾಲಿಕ ಕಾರ್ಯಕ್ರಮಗಳೇನು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

ಅ) ಬಂದಿದೆ.

ಆ) ಕೂಳೂರಿನಿಂದ ಬಂಗ್ರಕೂಳೂರವರೆಗೆ ಸಮುದ್ರ ಕೊರೆತದ ಹಾವಳಿ ಅಷ್ಟಾಗಿ ಇರುವುದಿಲ್ಲ. ಪಣಂಬೂರು ಪ್ರದೇಶದ ನವಮಂಗಳೂರು ಬಂದರು ಮಂಡಳಿ ಆಡಳಿತಕ್ಕೆ ಒಳಪಟ್ಟಿರುವುದರಿಂದ ಇಲ್ಲಿನ ಸಮುದ್ರ ಕೊರೆತದ ಸಮಸ್ಯೆಯು ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ.

ಮುಕ್ಕದ ಸಮೀಪ ಸಸಿಹಿತ್ಲು ಎಂಬಲ್ಲಿ ಸಮುದ್ರ ಕೊರೆತ ತಡೆಗೋಡೆ ನಿರ್ಮಾಣವು ೧೯೬೯ರಿಂದ ಪ್ರಾರಂಭಗೊಂಡಿದ್ದು ಇದುವರೆಗೆ ೨.೦೨ ಕಿ. ಮೀ. ಉದ್ದದ ತಾತ್ಕಾಲಿಕ ತಡೆಗೋಡೆ ಹಾಗೂ ೦.೪೦ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ಕಾಮಗಾರಿಯು ಪೂರ್ಣಗೊಂಡಿದೆ. ೦.೬ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ನಿರ್ಮಾಣದ ಕಾಮಗಾರಿಯು ಪ್ರಗತಿಯಲ್ಲಿದ್ದು ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ೦.೨೦ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ನಿರ್ಮಾಣದ ಕಾಮಗಾರಿಯು ಸೇರಿರುತ್ತದೆ.

ಸುರತ್ಕಲ್ ಸಮೀಪ ಕುಳಾಯಿ ಎಂಬಲ್ಲಿ ೦.೧೫ ಕಿ. ಮೀ. ಉದ್ದದ ಶಾಶ್ವತ ತಡೆಗೋಡೆ ಕಾಮಗಾರಿ ಪೂರ್ಣಗೊಂಡಿರುತ್ತದೆ ಹಾಗೂ ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ೦.೧೫ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ಕಾಮಗಾರಿಯು ಸೇರಿರುತ್ತದೆ.

ಸುರತ್ಕಲ್ ಸಮೀಪ ಗುಡ್ಡೆಕೊಪ್ಪ ಎಂಬಲ್ಲಿ ೦.೧೦ ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ಕಾಮಗಾರಿಯು ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ಸೇರಿರುತ್ತದೆ.

೧೯೯೦-೯೧ನೇ ಸಾಲಿನಲ್ಲಿ ಪ್ರಾರಂಭಿಸುವ ಹೊಸ ನೀರಾವರಿ ಯೋಜನೆಗಳು

೧೫೩. ಶ್ರೀ ಬಿ. ಹೆಚ್. ಬನ್ನಿಕೋಡ (ಹಿರೇಕೆರೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೯೦-೯೧ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲು ತೀರ್ಮಾನಿಸಿದ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಆ) ಅವು ಯಾವುವು ಮತ್ತು ಅವುಗಳ ಅಂದಾಜು ವೆಚ್ಚ ಎಷ್ಟು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

ಅ) ೧೯೯೦–೯೧ನೇ ಸಾಲಿನಲ್ಲಿ ಯಾವ ಹೊಸ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಲು ಉದ್ದೇಶಿಸಿಲ್ಲ. ಹೊಸ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಸಲುವಾಗಿ ಪ್ರಸಕ್ತ ಸಾಲಿನಲ್ಲಿ ೧೦೦ ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಆಯವ್ಯಯದಲ್ಲಿ ಯಾವ ನಿರ್ದಿಷ್ಟ ಹೊಸ ಸಣ್ಣ ನೀರಾವರಿ ಯೋಜನೆಗಳನ್ನೂ ಗುರುತಿಸಿ ಸೇರಿಸಿರುವುದಿಲ್ಲ. ಸಂಭವನೀಯ ೨೯೨ ಹೊಸ ಸಣ್ಣ ನೀರಾವರಿ ಯೋಜನೆಗಳನ್ನು ಪಟ್ಟಿ ಮಾಡಿದ್ದು, ಈ ಪೈಕಿ ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಶಕ್ಯವಾದವುಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ತುಂಗಾ ಮೇಲ್ದಂಡೆ ನೀರಾವರಿ ಯೋಜನೆಯ ಅಣೆಕಟ್ಟು

೧೮೪. ಶ್ರೀ ಬಿ. ಎಚ್. ಬನ್ನಿಕೋಡ (ಹಿರೇಕೆರೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಅಣೆಕಟ್ಟು ಕಟ್ಟದೆ, ಹೆಚ್ಚು ಜಮೀನು ಮುಳುಗಡೆಯಾಗದೆ ಅತಿ ಕಡಿಮೆ ವೆಚ್ಚದಲ್ಲಿ ಅತಿ ಹೆಚ್ಚು ನೀರಾವರಿ ಸೌಲಭ್ಯ ಒದಗಿಸಬಲ್ಲ ಯೋಜನೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ೧೯೯೦–೯೧ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದೇ?

ಇ) ಹಾಗೂ ಈ ಯೋಜನೆಗಾಗಿ ೧೯೯೦–೯೧ನೇ ಸಾಲಿನಲ್ಲಿ ಎಷ್ಟು ಹಣ ಒದಗಿಸಲಾಗುವುದು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಯೋಜನಾ ವರದಿ ಇನ್ನೂ ತಾಂತ್ರಿಕ ಸಮಿತಿಯಿಂದ ಪರಿಶೀಲನೆ ಹಾಗೂ ಬಿಡುಗಡೆ ಪಡೆಯುವ ಹಂತದಲ್ಲಿದೆ.

ಇ) ೫.೦೦ ಲಕ್ಷ ರೂ.ಗಳು.

ಧಾರವಾಡ ಜಿಲ್ಲೆಯ ರಾಮತೀರ್ಥ ಮತ್ತು ಹಳ್ಳೂರು ಏತ ನೀರಾವರಿ ಯೋಜನೆಗಳು

೧೮೫. ಶ್ರೀ ಬಿ. ಹೆಚ್. ಬನ್ನಿಕೋಡ (ಹಿರೇಕೆರೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಈಗಾಗಲೇ ಮಂಜೂರಾತಿ ಪಡೆದಿರುವ ರಾಮತೀರ್ಥ ಮತ್ತು ಹಳ್ಳೂರು ಏತ ನೀರಾವರಿ ಯೋಜನೆಗಳನ್ನು ೧೯೯೦–೯೧ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದೇ?

ಆ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಈ ಯೋಜನೆಗಳ ಅಂದಾಜು ವೆಚ್ಚ ಎಷ್ಟು?

ಈ) ಈ ಯೋಜನೆಗಳಿಂದ ಎಷ್ಟು ಎಕರೆ ನೀರಾವರಿಯಾಗುವುದು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ಈ ಎರಡೂ ಯೋಜನೆಗಳಿಗೆ ಸಾಲ ಮಂಜೂರಾತಿಗಾಗಿ ನಬಾರ್ಡ್‌ನೊಂದಿಗೆ ವ್ಯವಹರಿಸಲಾಗಿದೆ. ಸಾಲ ಮಂಜೂರಾತಿ ಆದ ನಂತರ ಫಲಾನುಭವಿಗಳಿಂದ ಮುಚ್ಚಳಿಕೆ ಪಡೆದು ಕೆಲಸ ಪ್ರಾರಂಭಿಸಲಾಗುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಮತ್ತು ಈ)

	ಅಂದಾಜು ವೆಚ್ಚ (೧೯೮೭–೮೮ನೇ ಸಾಲಿನ ದರಪಟ್ಟಿಯ ಪ್ರಕಾರ)	ಅಚ್ಚುಕಟ್ಟು
ರಾಮ ತೀರ್ಥ	೩೧.೦೨ ಲಕ್ಷ ರೂ.	೬೦೭ ಹೆಕ್ಟೇರು
ಹಳ್ಳೂರು	೧೦೫.೩೦ ಲಕ್ಷ ರೂ.	೮೯೦ ಹೆಕ್ಟೇರು